ಆಗ್ತಿರಲಿಲ್ಲ. ತನ್ನ ಮ್ಯಾಲೆನೆ ತಾನೆ ನಕರಿ ಚಕರಿ ಮಾಡಕೋತ ಜೊತಿಗಿದ್ದ ಬಡಸೊ ಪಾರಗೋಳಿಗೂ ಚಿಡಾಸ್ಗೋತ ಇರತಿದ್ದಳು. ಅವಳ ವೈಯಕ್ತಿಕ ಬದುಕು ಹೆಂಗೇ ಇರಲಿ, ಅಂತಃಕರಣ ಸ್ವಭಾವ, ಧಾರಾಳತನದಿಂದ ಕೆಲಸ ಮಾಡುವ ಹುಡುಗರು ಆಕೆಯನ್ನು ಹಚ್ಚಿಕೊಂಡಿದ್ದರು. ಎಲ್ಲಕ್ಕಿಂತ ಹೆಚ್ಚಾಗಿ ಲಹರಿ ಹೆಣ್ಣುಮಗಳು. ದೊಡ್ಡದೊಂದು ಕಾರ್ಯಕ್ರಮ ಮುಗಿತಂದ್ರ ಸುಸ್ತಾದ ಹುಡುಗರಿಗೆಲ್ಲ, ''ನಡಿರೋ... ಇವತ್ತ ಎಲ್ಲರೂ ಸಿನೆಮಾಕ್ಕ ಹೋಗೋಣು. ಬಾಲ್ಕನಿ ಟಿಕೀಟ್ ತಗಸ್ತೀನಿ'' ಅಂತ ಹುರಿದುಂಬಿಸಿ ಅಮರಪಾಲಿ ಟಾಕೀಜಿಗೆ ಕರಕೊಂಡು ಹೊಗುವಾಕಿ. ರವಿಚಂದ್ರನ್ ಸಿನೆಮಾ ಬಂದ್ರಂತೂ ಫಸ್ಟ್ ಡೇ, ಫಸ್ಟ್ ಶೋ. ''ಯಾರ ಬರ್ರೀ ಬಿಡ್ರೀ ನಾ ಅಂತೂ ಹೋಗಾಕಿ'' ಎಂದಾಗ ಎಲ್ಲರೂ ಅಕ್ಕಾ ರೊಕ್ಕಿಲ್ಲ... ಅಂತ ತಲಿ ತುರುಸಿಕೊಂಡ್ರ, ''ರೊಕ್ಕ ಯಾರ್ ಕೇಳ್ಯಾರ ನಿಂಗ. ನಡಿ ಸುಮ್ಮ'' ಅಂತ ಜಬರಿಸಿಬಿಡುತಿದ್ದಳು. ತನ್ನ ಬದುಕಿನ ರವಿಚಂದ್ರನಂತೂ ಮುಳಗಿಹೋಗ್ಯಾನ. ಆತನನ್ನಾದರೂ ನೋಡಿ ಖುಷಿ ಪಡುಬೇಕೆಂಬ ಆಸೆ ಇರಬೇಕು ಸುನಂದಾಗೆ.

ಜನ ಹೋಳಿ ಹುಣ್ಣಿವೆ ಆಗಿ ಶರಣಬಸ್ಸಪ್ಪನ ತೇರ ಎಳಿಯುವ ದಾರಿಯೇ ನೋಡತಿದ್ದರು. ಉಗಾದಿ ಆಗುತ್ತಲೆ ಮೊದಲ ಮೂರ್ತಕ್ಕೆ ಲಗ್ನ ಸುರುವಾದ್ರ ಜೇಷ್ಠಮಾಸದವರೆಗೂ ಖಾಲಿ ಇರಂಗಿಲ್ಲ.

